# ಬಸವಣ್ಣನವರ ವಚನಗಳಲ್ಲಿ ಮಾನವ ಸಂದೇಶಗಳು

*ಶ್ರೀನಿವಾಸ.ಎಸ್.ನಲವಾಗಲ*

*ಕನ್ನಡ ಉಪನ್ಯಾಸಕರು*

*ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ.ಹಾವೇರಿ*

*ಜಿಲ್ಲಾ:– ಹಾವೇರಿ*

ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೇ ಶತಮಾನವನ್ನು ಸಮಾಜೋ–ಧಾರ್ಮಿಕ ಆಂದೋಲನದ ಯುಗವೆಂದು ಕರೆಯುತ್ತಾರೆ.ಅಂದಿನ ಸಮಾಜದಲ್ಲಿ ಅನೇಕ ವೈರುಧ್ಯಗಳಾದ ಮೂಢನಂಬಿಕೆ , ಅಸ್ಪೃಶ್ಯತೆ , ಅಸಮಾನತೆ , ಸ್ತ್ರೀ ಶೋಷಣೆ , ಮೂರ್ತಿಪೂಜೆ ಖಂಡನೆ , ಜಾತೀಯತೆ ಮನೆ ಮಾಡಿಕೊಂಡಿದ್ದವು. ಈ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸುವ ಸಲುವಾಗಿ ಅಂದಿನ ಸಮಾಜದಲ್ಲಿ ಅನೇಕ ಶಿವಶರಣ–ಶರಣೆಯರು 'ವಚನ' ಎಂಬ ಜ್ಞಾನಜ್ಯೋತಿಯ ಮೂಲಕ ಸಮಾಜವನ್ನು ಕತ್ತಲಿನಿಂದ ಬೆಳಕಿನೆಡೆಗೆ , ಅಜ್ಞಾನದಿಂದ ಜ್ಞಾನದೆಡೆಗೆ ತರಲು ಪ್ರಯತ್ನಿಸಿದರು. ಅನೇಕ ಶಿವಶರಣರು ಅಂದಿನ ಸಮಾಜವನ್ನು ವಚನ ಕಾಂತಿಯ ಮೂಲಕ ಸಮಾಜವನ್ನು ಸುಧಾರಿಸಲು ಪ್ರಯತ್ನಿಸಿದರು. ಅಂತಹ ಶರಣರೆಂದರೆ ಬಸವಣ್ಣ , ಅಲ್ಲಮಪ್ರಭು , ಜೇಡರ ದಾಸಿಮಯ್ಯ , ಅಂಬಿಗರ ಚೌಡಯ್ಯ , ಡೋಹರ ಕಕ್ಕಯ್ಯ , ಹಡಪದ ಅಪ್ಪಣ್ಣ ಮೊದಲಾದ ಶಿವಶರಣರು ಇದ್ದರು. ಹಾಗೆಯೇ ಅಕ್ಕಮಹಾದೇವಿ , ಗಂಗಾಂಬಿಕೆ , ನೀಲಾಂಬಿಕೆ , ದುಗ್ಗಳೆ , ಅಮ್ಮುಗೆ ರಾಯಮ್ಮ ಮೊದಲಾದ ಶಿವಶರಣೆಯರು ಭಾಗವಹಿಸಿದ್ದರು. ಕಾಯಕದ ಜೊತೆ ಬಿಡುವಿನ ವೇಳೆಯಲ್ಲಿ ಸಮಾಜದ ಬಗ್ಗೆ ಚಿಂತನೆ ಮಾಡುತ್ತಿದ್ದರು. ವಚನಗಳ ಮೂಲಕ ಸಮಾಜ ಸುಧಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರು.

ಓದಿದರೆ ಗದ್ಯವಾಗುವ , ಹಾಡಿದರೆ ಹಾಡಾಗುವ ವಿಶಿಷ್ಟ ಸಾಹಿತ್ಯವೇ ವಚನ ಸಾಹಿತ್ಯ.. ಹನ್ನೆರಡನೇ ಶತಮಾನದಲ್ಲಿ ರಾಜಸತ್ತೆಯ ಬಗ್ಗೆ ರಾಜರುಗಳು ಮತಸತ್ತತೆಯ ಬಗ್ಗೆ ಧರ್ಮಗಳು ಪರಸ್ಪರ ಸಂಘರ್ಷಕ್ಕೆ ನಿಂತಾಗ ಜನಪರ ಆಂದೋಲನವಾಗಿ ಕರ್ನಾಟಕದಲ್ಲಿ ಬಸವಣ್ಣನ ನೇತೃತ್ವದಲ್ಲಿ ಕ್ರಾಂತಿ ಉಂಟಾಯಿತು ಅದೇ ಶರಣರ ಕ್ರಾಂತಿ. ಕರ್ನಾಟಕದ ಬೀದರ್ ನ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿ ಅಲ್ಲಮಪ್ರಭುವನ್ನು ಶೂನ್ಯ ಸಿಂಹಾಸನದ ಪೀಠಾಧ್ಯಕ್ಷನನ್ನಾಗಿ ಮಾಡಿ ಬಸವಣ್ಣನ ನೇತೃತ್ವದಲ್ಲಿ ಶರಣರ ಕ್ರಾಂತಿಯಾಯಿತು. ಬಸವಣ್ಣನವರು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾದ ಭಾಷೆಯಲ್ಲಿ ವಚನಗಳನ್ನು ಬರೆದು ಸಮಾಜ ತಿದ್ದುವ ಪ್ರಯತ್ನ ಮಾಡಿದರು.

*ದಯವಿಲ್ಲದ ಧರ್ಮವಾವುದಯ್ಯ*

*ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ*

*ದಯವೇ ಧರ್ಮದ ಮೂಲವಯ್ಯ*

*ಕೂಡಲ ಸಂಗಯ್ಯನಂತೆಲ್ಲದೊಲ್ಲನಯ್ಯಾ*

ಈ ವಚನದ ನುಡಿ ಜಗತ್ತಿನ ದಾರ್ಶನಿಕರು ನೀಡಿದ ಸಂದೇಶದಂತಿದೆ. ಹೊಡಿ – ಬಡಿ – ಕೊಲ್ಲು ಎನ್ನುವ ಧರ್ಮ ಇದನ್ನು ಮನಗಾಣಬೇಕಾಗಿದೆ. ದಯವೇ ಇಲ್ಲದ ಧರ್ಮ ಯಾವುದು ? ( ಅಂತಹ ಧರ್ಮಕ್ಕೆ ಧಿಕ್ಕಾರ ) ಸರ್ವ ಪ್ರಾಣಿಗಳಲ್ಲಿ – ಎಲ್ಲರಲ್ಲೂ ದಯವೇ ಬೇಕು. ಧರ್ಮದ ಮೂಲವೇ ದಯೆ. ದಯೆ ಇಲ್ಲದೊಡೆ ಕೂಡಲ ಸಂಗಮನು ಒಪ್ಪನು ಎನ್ನುತ್ತಾರೆ.

*ನೀನೊಲಿದೊಡೆ ಕೊರಡು ಕೊನರುವುದಯ್ಯ*

*ನೀನೊಲಿದೊಡೆ ಬರಡು ಹಯನುವುದಯ್ಯ*

*ನೀನೊಲಿದೊಡೆ ವಿಷವೆಲ್ಲ ಅಮೃತವಹುದಯ್ಯ*

*ಇದಿರಲ್ಲಿರ್ಪುವು ಕೂಡಲ ಸಂಗಮದೇವಾ.*

ಭಗವಂತನೊಲಿದೊಡೆ ಒಣಗಿದ ಮರ ಚಿಗುರೊಡೆದು ಚಿಗುರಿತು. ಬರಡು ದನ – ಎಮ್ಮೆಗಳು ಕರು ಹಾಕಿ ಹಾಲು ನೀಡಿತು. ವಿಷ ಅಮೃತವಾದೀತು. ನಮಗೆ ಬೇಕಾದ ಎಲ್ಲಾ ವಸ್ತುಗಳು ದೇವರ ಅನುಗ್ರಹದಿಂದ ದೊರೆಯಲು ಸಾಧ್ಯ ಎಂಬುದನ್ನು ಬಸವಣ್ಣನ ಈ ವಚನಗಳಿಂದ ತಿಳಿಯಬಹುದಾಗಿದೆ.

*ಉಳ್ಳವರು ಶಿವಾಲಯವ ಮಾಡಿಹರು*

*ನಾನೇನು ಮಾಡಲಿ ಬಡವನಯ್ಯಾ*

*ಎನ್ನ ಕಾಲೇ ಕಂಬ ,*

*ದೇಹವೇ ದೇಗುಲ*

*ಶಿರ ಹೊನ್ನ ಕಳಶವಯ್ಯಾ*

*ಕೂಡಲಸಂಗಮದೇವಾ ಕೇಳಯ್ಯಾ*

*ಸ್ಥಾವರಕ್ಕಳಿವುಂಟು , ಜಂಗಮಕ್ಕಳಿವಿಲ್ಲಾ.*

ಹಣವಿದ್ದವರು ದೇವಸ್ಥಾನ ಕಟ್ಟಿಸುತ್ತಾರೆ. ಬಡವನಾದ ನಾನೇನು ಮಾಡಲಿ. ಎನ್ನ ಕಾಲು ಕಂಬವಾಗಿ , ದೇಹ ದೇಗುಲವಾಗಿ , ತಲೆಯೇ ದೇವಸ್ಥಾನದ ಹೊನ್ನ ಕಳಶವಾಗಿ , ಓ ದೇವರೇ ಕೇಳು ಭೌತಿಕವಾದ ಕಲ್ಲು ಮಣ್ಣುಗಳಿಂದ ಕೂಡಿದ ಈ ದೇವರ ಸ್ಥಾವರ ಕಾಲಾನುಕಾಲಕ್ಕೆ ನಶಿಸಿ ಹೋಗುತ್ತದೆ. ಆದರೆ ಆತ್ಮಜ್ಞಾನದ ಈ ಜಂಗಮ ತತ್ವಕ್ಕೆ ಎಂದೂ ಅಳಿವಿಲ್ಲಾ ಎನ್ನುತ್ತಾರೆ. ಇಂತಹ ಸುಂದರ ಭಾವನಾತ್ಮಕ ಸಂದೇಶ , ಆತ್ಮೋದ್ಧಾರದ ಸಾರ .

*ಕಳಬೇಡ ಕೊಲಬೇಡ , ಹುಸಿಯ ನುಡಿಯಲು ಬೇಡ*

*ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ*

*ತನ್ನ ಬಣ್ಣಿಸಬೇಡ , ಇದಿರು ಹಳಿಯಲುಬೇಡ*

*ಇದೇ ಅಂತರಂಗ ಶುದ್ಧಿ , ಇದೇ ಬಹಿರಂಗ ಶುದ್ಧಿ*

*ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ.*

ಕಳ್ಳತನ , ಕೊಲೆ , ಸುಳ್ಳು ಹೇಳುವುದು , ಅನ್ಯರ ಮೇಲೆ ಸಿಟ್ಟಾಗುವುದು , ಅಸಹ್ಯ ಪಡುವುದು , ತನ್ನನ್ನು ತಾನು ವರ್ಣಿಸಿಕೊಳ್ಳುವುದು, ಇತರರನ್ನು ಜರಿಯುವುದು ಬೇಡ. ಇವೆಲ್ಲವನ್ನೂ ನಾವು ಬಿಟ್ಟಾಗ ಇದೇ ನಮ್ಮ ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಗೊಳಿಸುತ್ತದೆ. ಇದೇ ಬದುಕಿನಿಂದ ನಾವು ಅಂತರಂಗವನ್ನು ಒಲಿಸಿಕೊಳ್ಳುವ ಕ್ರಮ ಎಂದಾಗ ಎಂತಹ ಉನ್ನತ ಸಂದೇಶವನ್ನು ಬಸವಣ್ಣ ಜಗತ್ತಿಗೆ ಸಾರಿದ್ದಾನೆಂದು ತಿಳಿದು ಬರುತ್ತದೆ.

*ಕೊಲುವವನೇ ಮಾದಿಗ*

*ಹೊಲಸು ತಿಂಬುವವನೇ ಹೊಲೆಯ*

*ಸಕಲ ಜೀವಾತ್ಮರಿಗೆ ಲೇಸನೆ ಬಯಸುವ*

*ನಮ್ಮ ಕೂಡಲ ಸಂಗಮ ಶರಣರೇ ಕುಲಜರು.*

ಬಸವಣ್ಣನವರು ಸಮಾಜದಲ್ಲಿನ ಜನರನ್ನು ಕುರಿತು ಬಹಳ ಮಾರ್ಮಿಕವಾಗಿ ಈ ವಚನದಲ್ಲಿ ಹೇಳಿದ್ದಾರೆ. ಜಾತಿ ಹುಟ್ಟಿನಿಂದಲ್ಲ ಕಾಯಕದ ಆಚರಣೆ ಎಂದು ತಿಳಿಸುತ್ತಾರೆ. ಸಾಮಾಜಿಕ ಸಮಾನತೆ , ಆರ್ಥಿಕ ಸಮಾನತೆಯನ್ನು ಬಸವಣ್ಣ ಎತ್ತಿ ಹಿಡಿಯುತ್ತಾನೆ. ರಾಜ ಬಿಜ್ಜಳನ ಆಸ್ಥಾನದಲ್ಲಿ ಆರ್ಥಿಕ ಮಂತ್ರಿಯಾಗಿದ್ದ ಭಂಡಾರಿ ಬಸವಣ್ಣ ರಾಜ್ಯದ ಆರ್ಥಿಕ ಆದಾಯದಲ್ಲಿ ಪ್ರಜೆಗಳಿಗೆ ಮೀಸಲು ಎಂದು ತಿಳಿದು ಆನುಂ ಬಿಜ್ಜಳಿಗೆ ಅಂಜುವೆನೆ ಎನ್ನುತ್ತಾರೆ.

*ಹಬ್ಬಕ್ಕೆ ತಂದ ಹರಕೆಯ ಕುರಿ*

*ತೋರಣಕ್ಕೆ ತಂದ ತಳಿರ ಮೇಯಿತ್ತು*

*ಕೊಂದಹರೆಂಬುದನರಿಯದೆ*

*ಬೆಂದ ಒಡಲ ಹೊರವುತ್ತಲ್ಲದೆ*

*ಅಂದದೆ ಹುಟ್ಟಿತ್ತು , ಅಂದದೆ ಹೋದಿತ್ತು*

*ಕೊಂದವರು ಅವರೇ ಕೂಡಲಸಂಗಮದೇವ.*

*ಹಾವಿನ ಬಾಯ ಕಪ್ಪೆ ಹಸಿರು*

*ಹಾರುವ ನೊಣಕ್ಕೆ ಆಸೆ ಮಾಡುವಂತೆ*

*ಶೂಲನೇರುವ ಕಳ್ಳನು ಹಾಲು ತುಪ್ಪವ ಕುಡಿದು*

*ಮೇಲೇಸು ಕಾಲವಾ ಬದುಕುವನು*

*ಕೆಡುವೊಡಲನಚ್ಚಿ , ಕಡು ಹುಸಿಯನೇ ನುಡಿದು ಒಡಲ ಹೊರೆವರ*

*ಕೂಡಲಸಂಗಮ ದೇವಯ್ಯನೊಲ್ಲ ಕಾಣಿರಣ್ಣಾ.*

ಹಬ್ಬದಲಿ ಪ್ರಾಣಿ ಬಲಿ ಕೊಡಲು ತಂದ ಕುರಿ ತನ್ನ ಹೊಟ್ಟೆ ಹಸಿವಿಗೆ ತಳಿರು ತೋರಣವನ್ನು ತಿನ್ನುತ್ತದೆ. ಹುಟ್ಟು ಸಾವಿನ ಬಗ್ಗೆ ತಿಳಿಯಲು ಪ್ರಾಣಿ ಬಲಿ ಕೊಡುವವರು ಬದುಕಿ ಉಳಿಯುತ್ತಾರೆಯೇ..? ಸಾವು ಶಾಶ್ವತವಲ್ಲವೇ.

ಹಸಿದ ಹಾವು ಕಪ್ಪೆಯನ್ನು ನುಂಗುತ್ತದೆ. ಅದೇ ಕಪ್ಪೆ ತಾನು ಹಾವಿನ ಬಾಯಿಯಲ್ಲಿದ್ದು ತನ್ನ ಸಾವನ್ನು ತಿಳಿಯದೆ ತನ್ನ ಹಸಿವಿಗಾಗಿ ಹಾರುವ ನೊಣಕ್ಕಾಗಿ ಆಸೆ ಮಾಡುತ್ತದೆ. ಗಲ್ಲು ಶಿಕ್ಷೆಗೊಳಗಾದ ಖೈದಿ ಜೈಲಿನಲ್ಲಿ ಹಾಲು ತುಪ್ಪ ಸವಿದು ಇನ್ನೆಷ್ಟು ಕಾಲ ಬದುಕ ಬಯಸುತ್ತಾನೆ. ಕೆಟ್ಟ ಹೊಟ್ಟೆಯ ನಂಬಿ ಹಸಿ ಹಸಿ ಸುಳ್ಳನ್ನು ಹೇಳುತ್ತದೆ , ಹೊಟ್ಟೆ ಪಾಡಿಗಾಗಿ ಜೀವಿಸುವವರನ್ನು ದೇವರು ತನ್ನ ಬಳಿ ಸೇರಿಸಲಾರ. ಜೀವದಾಸೆ ಮತ್ತು ಹೊಟ್ಟೆ ಪಾಡಿಗಾಗಿ ಜೀವನ ಸಾಗಿಸುವವರು ಭಕ್ತರಲ್ಲ. ಅವರನ್ನು ದೇವರು ಸ್ವೀಕರಿಸಲಾರ ಎನ್ನುವ ಸಂದೇಶ ಈ ವಚನಗಳಲ್ಲಿ ಕಂಡು ಬರುತ್ತದೆ.

***ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು***

***ದಿಟ ನಾಗರ ಕೊಲ್ಲೆಂಬರಯ್ಯ***

***ಉಂಬ ಜಂಗಮ ಬಂದರೆ ನಡೆಯೆಂಬರು***

***ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯ***

***ನಮ್ಮ ಕೂಡಲಸಂಗನ ಶರಣರ ಕಂಡುದಾನೇನವ ಮಾಡಿದಂ***

***ಕಲ್ಲು ತಾಗಿದ ಮುಟ್ಟೆಯೆಂತಪ್ಪರಯ್ಯ.***

ಇವತ್ತಿನ ಆಧುನಿಕ ಯುಗದಲ್ಲಿ ಮನುಷ್ಯ ಡಾಂಭಿಕತೆಯಿಂದ ಮೆರೆಯುತ್ತಿದ್ದಾನೆ. ನಿಜವಾದ ಹಾವು ಕಂಡರೆ ಕಲ್ಲಿನಿಂದ ಹೊಡೆದು ಕೊಲ್ಲುತ್ತಾರೆ. ಆದರೆ ಅದೇ ನಾಗರ ಹಾವಿನ ಕಲ್ಲಿನ ಮೂರ್ತಿಗೆ ಹಾಲು ಎರೆಯುತ್ತಾರೆ. ಸಮಾಜದಲ್ಲಿ ಎಷ್ಟೋ ಮಕ್ಕಳು ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದೆ ಹಸಿವಿನಿಂದ ಬಳಲುತ್ತಿದ್ದಾರೆ. ಆದರೆ ಕಲ್ಲು ನಾಗನಿಗೆ ಹಾಲು ಎರೆದಾಗ ಆ ಹಾಲು ಮೂರ್ತಿಯ ಮೇಲಿನಿಂದ ಹರಿದು ಮಣ್ಣು ಪಾಲಾಗುತ್ತದೆ. ಅದೇ ಹಾಲನ್ನು ಅಪೌಷ್ಟಿಕ ಕೊರತೆಯಿಂದ ಬಳಲುವ ಮಕ್ಕಳಿಗೆ ಹಾಲನ್ನು ಕುಡಿಯಲು ಕೊಡಬೇಕು. ಅಂತಹ ಮಾನವೀಯತೆ ಮನುಷ್ಯ ಮೆರಯಬೇಕು. ದಾನಗಳಲ್ಲಿ ಶ್ರೇಷ್ಠವಾದ ದಾನ ಅನ್ನದಾನ. ಅಂತಹ ಅನ್ನದಾನ ಮನುಷ್ಯ ಮಾಡಬೇಕೆಂದು

ಬಸವಣ್ಣ ಹೇಳಿದ್ದಾನೆ. ಅನ್ನ ದಾಸೋಹದ ಪರಿಕಲ್ಪನೆ ಕೊಟ್ಟಿರುವುದು ಇದೇ ಅರ್ಥದಲ್ಲಿ. ಊಟ ಮಾಡದ ಕಲ್ಲು ಮೂರ್ತಿಗೆ ನೈವೇದ್ಯ ಹಿಡಿಯುವ ಜನರಿಗೆ ಬಸವಣ್ಣ ಬಡತನದಿಂದ ಬಳಲುವ ಭಿಕ್ಷುಕನಿಗೆ ಆ ಅನ್ನವನ್ನು ನೀಡಿ ಅವನ ಹಸಿವು ತಣಿಸಬೇಕೆಂದು ಹೇಳುತ್ತಾನೆ. ಬಸವಣ್ಣನ ಪ್ರತಿಯೊಂದು ವಚನವು ಮನುಕುಲಕ್ಕೆ ಸಂದೇಶವಾಗಿವೆ. ಬಸವಣ್ಣನ ವಚನವು ಸರ್ವಕಾಲಕ್ಕೂ ಸಲ್ಲುವಂತಹದ್ದು.

***ಗ್ರಂಥ ಋಣ :–***

***1.ವಚನ ಕಮ್ಮಟ – (ಸಂ)– ಕೆ. ಮರುಳಸಿದ್ಧಪ್ಪ ಮತ್ತು ಕಿ.ರಂ.ನಾಗರಾಜ***

***2. ಬಸವಣ್ಣನ ವಚನಗಳು – ಡಾ. ಎಲ್. ಬಸವರಾಜ.***